**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1214/2016**

| | | | |
|---|---|---|---|
| ಸಾಕ್ಷಿದಾರರ ಹೆಸರು | | ಮಹದೇವಶೆಟ್ಟಿ | ಪ್ರಾಸಾಃ 1 |
| ತಂದೆಯ/ಗಂಡನ ಹೆಸರು | | ಲೇಟ್ ಕೆಂಚಗೋಪಾಲ ಶೆಟ್ಟಿ | ಚಾಸಾಃ 2 |
| ವಯಸ್ಸು | | 45 ವರ್ಷ | |
| ಕೆಲಸ | | ತರಕಾರಿ ವ್ಯಾಪಾರ | ಸಾ ಪ್ರ ಬೋ |
| ವಾಸ | | ಹೆಮ್ಮರಗಾಲ ಗ್ರಾಮ | ದಿಃ 06/04/2022 |

ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ

ಆರೋಪಿತರು ಗೊತ್ತು. ಚಾಸಾ-1 ನನ್ನ ಹೆಂಡತಿ. ಚಾಸಾ-3 ರಿಂದ 7 ಗೊತ್ತು. ಈ ಕೇಸು ದಾಖಲು ಆಗುವ ಮುಂಚೆ 6 ತಿಂಗಳಿನಿಂದ ನಮ್ಮ ಗ್ರಾಮದ ನಮ್ಮ ಮನೆಯ ಹತ್ತಿರ ಇರುವ ನಮ್ಮ ಖಾಲಿ ನಿವೇಶನದಲ್ಲಿ 1 ನೇ ಆರೋಪಿಗೂ ನನಗೂ ತಕರಾರು ಇತ್ತು. ಸದರಿ ಖಾಲೀ ನಿವೇಶನ ನನಗೆ ಸೇರಿರುತ್ತದೆ. ಖಾಲೀ ನಿವೇಶನ ನಮಗೆ ಸೇರಬೇಕು ಖಾಲಿ ಮಾಡು ಎಂದು ಆರೋಪಿತರು ಜಗಳ ಮಾಡುತ್ತಿದ್ದರೂ ಆದರೂ ನಾವು ಸುಮ್ಮನಾಗಿದ್ದೆವು.

ದಿನಾಂಕ 21.05.2016 ರಂದು ರಾತ್ರಿ 9.00 ಗಂಟೆ ಸಮಯದಲ್ಲಿ 1 ಮತ್ತು 2 ನೇ ಆರೋಪಿತರು ನಮ್ಮ ಮನೆಯ ಬಳಿ ಇರುವ ಖಾಲಿ ಜಾಗಕ್ಕೆ ಬಂದು 1 ನೇ ಆರೋಪಿಯು ಬೋಳಿ ಮಗನೇ ಸೂಳೆ ಮಗನೆ ಎಂದು ಬೈದ ಈ ರೀತಿ ಬೈಯಬೇಡ ಎಂದು ನಾನು ಹೇಳಿದಾಗ 2 ನೇ ಆರೋಪಿಯು ದೊಣ್ಣೆಯಿಂದ ನನ್ನ ಮೈಮೇಲೆ ಹೊಡೆದಿರುತ್ತಾಳೆ. 1 ನೇ ಆರೋಪಿಯು ಮನೆಗೆ ಹೋಗಿ ಮಚ್ಚನ್ನು ತೆಗೆದುಕೊಂಡು ಬಂದು ಮುಖದ ಎಡಭಾಗದ ಕಣ್ಣಿಗೆ ಹೊಡೆದು ತೀವ್ರ ಸ್ವರೂಪದ ಗಾಯ ಮಾಡಿದನು. ನಂತರ ನಾನು ನಂಜನಗೂಡಿನ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ನಂಜನಗೂಡಿನ ವೈದ್ಯರು ಕಣ್ಣಿನ ಪೊರೆ ಹೋಗಿದೆ ಹೆಚ್ಚಿನ ಚಿಕಿತ್ಸೆ ಗಾಗಿ ಕೆ.ಆರ್. ಆಸ್ಪತ್ರೆ ಗೆ ಹೋಗಿರುತ್ತೇನೆ. ಅಲ್ಲಿ ಕಣ್ಣಿನ ವೈದ್ಯರು ಕಣ್ಣಿನ ನರಕ್ಕೆ ಏಟು ಆಗಿದ್ದ ಕಾರಣ ದೃಷ್ಟಿ ಬರುವುದಿಲ್ಲ ಎಂದು ಹೇಳಿರುತ್ತಾರೆ. ಶಾಶ್ವತವಾಗಿ ನನಗೆ ಎಡಕಣ್ಣಿನ ದೃಷ್ಟಿ ಇರುವುದಿಲ್ಲ. 1 ನೇ ಆರೋಪಿಯು ನನ್ನ ಮೇಲೆ ಹಲ್ಲೆ ಮಾಡಿರುವ ಕಾರಣ ನಾನು ದೃಷ್ಟಿ ಕಳೆದುಕೊಂಡಿರುತ್ತೇನೆ. ಈ ವಿಚಾರವಾಗಿ ನನ್ನ

ಹೆಂಡತಿ ಚಾಸಾ-1 ರವರು ದೂರು ನೀಡಿರುತ್ತಾರೆ. ಚಾಸಾ-1 ರವರು ನನ್ನ ಜೊತೆ ಆಸ್ಪತ್ರೆಯಲ್ಲಿ ಇದ್ದ ಕಾರಣ 2 ದಿನ ತಡವಾಗಿ ದೂರು ನೀಡಿರುತ್ತಾರೆ. ನಾನು ಸುಮಾರು 1 ವಾರದ ಕಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. 29.05.2016 ರಲ್ಲಿ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ನಾನು ಒಂದು ಕಣ್ಣಿನ ದೃಷ್ಟಿ ಕಳೆದುಕೊಂಡಿದ್ದು ಮತ್ತು ಆಸ್ಪತ್ರೆಯಲ್ಲಿ ಚಿಕಿತ್ಸೆಗೆ 3,00,000/- ರೂಪಾಯಿ ಖರ್ಚ ಆಗಿದ್ದು ನನಗೆ ನ್ಯಾಯಾಲಯದಿಂದ ಪರಿಹಾರ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

( ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.)

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ
ಸಹಿ/-
1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾಧಂ,
ನಂಜನಗೂಡು